ಕರ್ನಾಟಕ ಸರ್ಕಾರ

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03.**

ಸಂಖ್ಯೆ:ಕಶಾಪ&ಮೌನಿಮಂ/ಪರೀಕ್ಷೆ/ಖಾ.ಅ.ನೋ/2023-24 ದಿನಾಂಕ: 18/12/2023

**ಸುತ್ತೋಲೆ**

ವಿಷಯ: ಮಾರ್ಚ್ 2024 ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ-1 ಕ್ಕೆ ಖಾಸಗಿ ಅಭ್ಯರ್ಥಿಗಳಾಗಿ ನೊಂದಾಯಿಸಿಕೊಳ್ಳುವ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ ಇಪಿ 203 ಎಸ್ಎಲ್‌ಬಿ 2023 ದಿನಾಂಕ:21/09/2023.
2. ಮಂಡಲಿಯ ಇದೇ ಸಮಸಂಖ್ಯೆ ಸುತ್ತೋಲೆ ದಿನಾಂಕ: 04-10-2023.
3. ಮಂಡಲಿಯ ಇದೇ ಸಮಸಂಖ್ಯೆ ಸುತ್ತೋಲೆ ದಿನಾಂಕ: 15-11-2023.
4. ಮಂಡಲಿಯ ಇದೇ ಸಮಸಂಖ್ಯೆ ಸುತ್ತೋಲೆ ದಿನಾಂಕ: 01-12-2023.

****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, 2024 ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ-1 ಕ್ಕೆ ಖಾಸಗಿ ಅಭ್ಯರ್ಥಿಗಳಾಗಿ ನೊಂದಾಯಿಸಿಕೊಳ್ಳಲು ಉಲ್ಲೇಖ 04 ರಲ್ಲಿ ದಿನಾಂಕ 12-12-2023 ರವರೆಗೆ ರೂ 500+700/- ಹಾಗೂ 1320/- ರೂಗಳ ವಿಶೇಷ ದಂಡಶುಲ್ಕದೊಂದಿಗೆ ಅವಕಾಶ ನೀಡಲಾಗಿತ್ತು.

ಆದರೆ ಪೋಷಕರು ಹಾಗೂ ವಿದ್ಯಾರ್ಥಿಗಳ ದೂರವಾಣಿ ಕರೆಗಳ ಮೇರೆಗೆ ಸದರಿ ಪರೀಕ್ಷೆಗೆ ಶುಲ್ಕ ಪಾವತಿಸುವ ದಿನಾಂಕವನ್ನು ಈ ಕೆಳಕಂಡಂತೆ ವಿಸ್ತರಿಸಿ ಆದೇಶಿಸಲಾಗಿದೆ.ಇದು ವಿದ್ಯಾರ್ಥಿಗಳಿಗೆ ಅಂತಿಮ ಅವಕಾಶವಾಗಿದ್ದು, ಮುಂದೆ ಯಾವುದೇ ಕಾರಣಕ್ಕೂ ದಿನಾಂಕವನ್ನು ವಿಸ್ತರಿಸಲಾಗುವುದಿಲ್ಲ.

| ಕ್ರಸಂ | ವಿವರ | ಅಭ್ಯರ್ಥಿಗಳು ಕಾಲೇಜಿಗೆ ಪರೀಕ್ಷಾ ಶುಲ್ಕ ಪಾವತಿಸಲು ದಿನಾಂಕ | ಕಾಲೇಜಿನ ಪ್ರಾಂಶುಪಾಲರು ಪರೀಕ್ಷಾ ಶುಲ್ಕವನ್ನು ಖಜಾನೆಗೆ ಸಂದಾಯ ಮಾಡುವ ದಿನಾಂಕ | ಅಭ್ಯರ್ಥಿಗಳ ಅರ್ಜಿಗಳನ್ನು ಮಂಡಲಿಯ PU Exam PortalLogin ನಲ್ಲಿ Update ಮಾಡಲು ಕೊನೆಯ ದಿನಾಂಕ | ಕಾಲೇಜಿನವರು ಅರ್ಜಿಗಳನ್ನು ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸಬೇಕಾದ ದಿನಾಂಕ |
|---|---|---|---|---|---|
| 1. | ಶುಲ್ಕದ ಜೊತೆಗೆ ದಂಡಶುಲ್ಕ 500/- ರೂಗಳು +700/- ರೂಗಳು + ವಿಶೇಷ ದಂಡಶುಲ್ಕ 1320/- ರೂಗಳು | 19-12-2023 ರಿಂದ 23-12-2023 | 26-12-2023 | 26-12-2023 | 28-12-2023 |

ಜಿಲ್ಲಾ ಉಪನಿರ್ದೇಶಕರು ಪ್ರಾಂಶುಪಾಲರಿಂದ ಸ್ವೀಕರಿಸಿದ ಅರ್ಜಿಗಳನ್ನು ಮಂಡಲಿಯ ಜಾಲತಾಣದ PU Exam PortalLoginನಲ್ಲಿ Update ಮಾಡಿರುವುದನ್ನು ಖಾತ್ರಿಪಡಿಸಿಕೊಂಡು, ಪ್ರಾಂಶುಪಾಲರಿಂದ Update ಮಾಡಿರುವುದಕ್ಕೆ ಸಂಬಂಧಿಸಿದಂತೆ ಮುಚ್ಚಳಿಕೆ ಪತ್ರ ಪಡೆದ ನಂತರ ಕಾಲೇಜುವಾರು ಕ್ರೋಢೀಕೃತ ವಿದ್ಯಾರ್ಥಿಗಳ ಪಟ್ಟಿ, ಶುಲ್ಕ ಪಾವತಿಸಿರುವ ಮೂಲ ಚಲನ್ ಹಾಗೂ ಚೆಕ್‌ಲಿಸ್ಟ್‌ನ್ನು ಖುದ್ದಾಗಿ ಕೇಂದ್ರ ಕಛೇರಿಗೆ ದಿನಾಂಕ: 30-12-2023 ರಂದು ಸಲ್ಲಿಸಲು ಸೂಚಿಸಿದೆ.

ನಿರ್ದೇಶಕರು (ಪಿಯು ಪರೀಕ್ಷೆ)
ಕರ್ನಾಟಕ ಶಾಲಾ ಪರೀಕ್ಷೆ ಮತ್ತು
ಮೌಲ್ಯ ನಿರ್ಣಯ ಮಂಡಲಿ.

**ಪ್ರತಿಗಳು:-**

1. ಅಧ್ಯಕ್ಷರ ಆಪ್ತ ಶಾಖೆ, ಕ.ಶಾ.ಪ&ಮೌ.ನಿ.ಮಂ ಬೆಂಗಳೂರು.
2. ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.
3. ಶಾಲಾ ಶಿಕ್ಷಣ ಇಲಾಖೆಯ (ಪದವಿ ಪೂರ್ವ) ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ಮಾಹಿತಿಗಾಗಿ ಹಾಗೂ ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ತಿಳಿಸಿದೆ.
4. ಪದವಿ ಪೂರ್ವ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ (ವಿದ್ಯಾರ್ಥಿಗಳಿಗೆ ಈ ಕುರಿತು ಸೂಕ್ತ ನಿರ್ದೇಶನ ನೀಡಲು)
5. ಸಹಾಯಕ ನಿರ್ದೇಶಕರು, ಗಣಕ ಶಾಖೆ, (ಮಂಡಲಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)
6. ಹೆಚ್ಚುವರಿ/ಕಛೇರಿ ಪ್ರತಿ.